**ಪರ್ಯಾಯ ಶೈಕ್ಷಣಿಕ ಯೋಜನೆ 2021 – 2022**

**6ನೇ ತರಗತಿ** **ಆಗಸ್ಟ್ 2021** **ವಿಷಯ: ಸಮಾಜ ವಿಜ್ಞಾನ**

| ಕ್ರ ಸಂ | ತಿಂಗಳು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನದ ಚಟುವಟಿಕೆ ಕಲಿಕೆಯಲ್ಲಿ ಸಮ್ಮಿಳಿತಗೊಳಿಸಿ ನೀಡಿದೆ |
|---|---|---|---|---|
| 1 | ಆಗಸ್ಟ್ | *ಇತಿಹಾಸದ ಪರಿಕಲ್ಪನೆ ಮೂಡಿಸುವುದು | **ಆಧಾರಗಳು – ಅರಿವು**<br>- ಸ್ಥಳ ಭೇಟಿ.<br>- ಲಾವಣಿ ಗಾಯನ.<br>- ಕಥನ.<br>**1.1. ಚಿತ್ರ ಪ್ರದರ್ಶನ:** ಚಿತ್ರದ ಸಹಾಯದಿಂದ ಮಾನವನ ಉಗಮದ ವಿಕಾಸದ ಹಂತಗಳನ್ನು ಹೆಸರಿಸಿ.<br>**1.2.ನಕಾಶೆ ರಚನೆ ;** ಭಾರತದ ಭೂನಕಾಶೆಯ ರಚನೆಮಾಡಿ ವಿವಿಧ ಶಿಲಾಯುಗಗಳ ನೆಲೆಗಳನ್ನು ಗುರುತಿಸಿ.<br>**1.3.ಆಯುಧಗಳ ಮಾದರಿ ತಯಾರಿಕೆ ;** ಶಿಲಾಯುಗಗಳ ಮಾನವನು ಬಳಸಿದ ಶಿಲಾಯುಧಗಳ ಮಾದರಿರಚನೆ ಮಾಡಿ.<br>**1.4.ವಸ್ತು ಸಂಗ್ರಹ:-**ನಿಮ್ಮ ಮನೆಯಲ್ಲಿ | - ಗ್ರಾಮದ /ಶಾಲಾ ಪರಿಸರದ ಮಾಸ್ತಿಕಲ್ಲು, ಸಿಡಿ, ಗೋಸಾಸ, ವೀರಗಲ್ಲು, ದೇವಾಲಯಗಳ ಭೇಟಿ ನೀಡಿರಿ.<br>* ಸ್ಥಳೀಯ ದೇವಾಲಯಗಳ ಶಿಲ್ಪಶೈಲಿ, ರಚನೆಯನ್ನು ಪರಿಚಯಿಸಿರಿ. ಕೋಟೆಗಳು, ಬತೇರಿಗಳು/ಅರಮನೆಗಳು ಇತ್ಯಾದಿ ಆಧಾರಗಳನ್ನು ಭೇಟಿ ನೀಡಿ ಪರಿಶೀಲಿಸುವಂತೆ ಅನುಕೂಲಿಸಿರಿ.<br>-ತಂತ್ರಜ್ಞಾನವನ್ನು ಬಳಸಿ ಪ್ರಾಗೈತಿಹಾಸಿಕ ಸ್ಮಾರಕಗಳನ್ನು ಪರಿಚಯಿಸುವುದು. ಮನೆಗಳಲ್ಲಿ ಲಭ್ಯವಿರುವ ತಾಡವೋಲೆ, ತಾಳೆಗರಿ ಗಳಿದ್ದರೆ ಅವುಗಳನ್ನು ವೀಕ್ಷಿಸಿ, ಶಾಲೆಯಲ್ಲಿ ಚರ್ಚಿಸುವಂತೆ ಮಾಡಿರಿ.<br>- ಲಾವಣಿಗಳನ್ನು ಹಾಡಿಸುವುದು. ಉದಾಹರಣೆ:-ಕುಮಾರರಾಮ.<br>1.1.ಮಾನವನ ಉಗಮದ ವಿಕಾಸದ ಹಂತಗಳ ಚಿತ್ರದ ಸಹಾಯದೊಂದಿಗೆ ಹೆಸರಿಸಲು ಸಹಕರಿಸಿ<br><br>1.2.ಭಾರತದ ಭೂನಕಾಶೆಯ ರಚನೆಮಾಡಲು ಸಹಕರಿಸಿ ವಿವಿಧ ನೆಲೆಗಳನ್ನು ಪರಿಚಯಿಸಿ ಅವುಗಳ ಮಹತ್ವ ತಿಳಿಯಲು ಸಹಕರಿಸಿ. |

| | | | | |
|---|---|---|---|---|
| | | | ಬಳಸುತ್ತಿರುವ ಹಳೆಯ ಪರಿಕರಗಳನ್ನು ಸಂಗ್ರಹಿಸಿ ಅದರ ಉಪಯೋಗಗಳನ್ನು ತಿಳಿಯಿರಿ.<br>**1.5.ಪಾತ್ರಾಭಿನಯ**: ಹೋಲುವ ಪಾತ್ರಾಭಿನಯ ಮಾಡಿರಿ.<br>**1.6.ಅಣುಕು ಪ್ರದರ್ಶನ:** ಮಾನವನ ಉಗಮದ ಬಗ್ಗೆ ಅಣುಕು ಪ್ರದರ್ಶನ:<br>**1.7.ಸ್ಥಳ ಭೇಟಿ:-**ಸ್ಥಳೀಯ ಪ್ರಾಚೀನ ಸ್ಥಳಗಳಿಗೆ ಬೇಟಿ ನೀಡಿರಿ.<br>**1.8. ವೇಷ ಭೂಷನ ಸ್ಪರ್ಧೆ:** ವಿವಿಧ ಶಿಲಾಯುಗ ಮಾನವರ ವೇಷಭೂಷಣ ಸ್ಪರ್ಧೆ ಏರ್ಪಡಿಸಿ<br>1.9.ಯೂಟೂಬ್ ಲಿಂಕ್ ವಿಡಿಯೋ ವಿಕ್ಷಣೆ ಮಾಡಿ ಮಾನವನ ಉಗಮದ ಬಗ್ಗೆ ಮುಕ್ತವಾಗಿ ಅಭಿಪ್ರಾಯ ತಿಳಿಸಿ.<br>**1.10.ವಿಚಾರ ವಿನಿಮಯ:**<br>**1.11.ಪಟ್ಟಿ ಮಾಡಿ:** | 1.3.ಶಿಲಾಯುಗಗಳ ಮಾನವನು ಬಳಸುತ್ತಿದ್ದ ವಿವಿಧ ಶಿಲಾಯುಧಗಳ ಚಿತ್ರ ಅಥವ ಮಾದರಿ ಮಕ್ಕಳು ಸಂಗ್ರಹಿಸಲಿ. ಅವುಗಳನ್ನು ಮಕ್ಕಳು ಇಂದಿನ ಆಯುಧಗಳಿಗೆ ಹೋಲಿಸಿ ಹೇಳಲಿ.<br>1.4.ಮನೆಯ ಹಳೆಯ ಪರಿಕರ ತರಲು ಹೇಳಿರಿ. ಅಥವ ಅದರ ಬಗ್ಗೆ ಮಕ್ಕಳು ಹೇಳಲಿ. ಅವನ್ನು ಪ್ರಾಗೈತಿಹಾಸ ಕಾಲದ ಪರಿಕರದೊಂದಿಗೆ ಸಂಬಂಧೀಕರಿಸಿ ಅರ್ಥೈಯಿಸಿರಿ. ಅವರ ಕುಟುಂಬದ ಹಿರಿಯರಿಂದ ಮಾಹಿತಿ ಪಡೆಯಲು ಅನುಕೂಲಿಸಿ.<br>1.8.ವಿವಿಧ ಶಿಲಾಯುಗ ಮಾನವರ ಚಿತ್ರ ಪ್ರದರ್ಶಿಸಿ ಪ್ರತಿ ವಿದ್ಯಾರ್ಥಿಗೆ ಆದಿಮಾನವನ ವೇಷಭೂಷಣ ಧರಿಸಲು ಪಾತ್ರಭಿನಯ ಮಾಡಲು ಸಹಕರಿಸಿ.<br>1.9.ಡಿಸ್ಕವರಿ ಚಾನಲ್ ಅಡಿ ಈ ಲಿಂಕ್ ಅವಲೋಕಿಸಿ ಚರ್ಚಿಸಿ.<br>https://www.nationalgeographic.org/video/humaevolution/<br>1.10.ಚಾರ್ಲ್ಸ್ ಡಾರ್ವಿನನ ವಿಕಾಸವಾದ ಸಿದ್ಧಾಂತವನ್ನು ವಿಜ್ಞಾನ ಶಿಕ್ಷಕರೊಂದಿಗೆ ವಿಚಾರ ವಿನಿಮಯ ಮಾಡಿಸಿ ತಿಳಿಯಲು ಸಹಕರಿಸಿ.<br>1.11.ಕರ್ನಾಟಕ ರಾಜ್ಯದ ಶಿಲಾಯುಗದ ನೆಲೆಗಳನ್ನು ಹೆಸರಿಸಿ ಪಟ್ಟಿ ಮಾಡಲು ತಿಳಿಸಿ. |

| | | | | |
|---|---|---|---|---|
| | | | | ಭೂಗೋಳ ಸಂಗಾತಿ-3ರ ಪುಸ್ತಕದಲ್ಲಿರುವ ಮಾನವ ವಿಕಾಸದ ಹೆಜ್ಜೆಗಳನ್ನು ಅವಲೋಕಿಸಲು ಸಹಕರಿಸಿ. |
| 2 | | ಪೌರತ್ವ | 2.1 ಕಲಿಕಾ ನಿರ್ಮಾಣ<br>2.2 ಚರ್ಚಾ ಗೋಷ್ಠಿ<br>2.3 ಗುಂಪು ಚರ್ಚೆ<br>2.4 ಅಣಕು ಪ್ರದರ್ಶನ<br>2.5 ಟ್ರೆಶರ್ ಹಂಟ್<br>2.6 ಹರಟೆ | 2.1 ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಪಂಚಾಯಿತಿ ರಚನೆ ಕಾರ್ಯವಿಧಾನವನ್ನು ಚರ್ಚಿಸಿ.<br>2.2 ವಿದ್ಯಾರ್ಥಿಗಳಲ್ಲಿ ಪ್ರತ್ಯಕ್ಷ, ಪರೋಕ್ಷ ಚುನಾವಣೆ ನಡೆಸಿ ಪ್ರತಿನಿಧಿ ಆಯ್ಕೆ ಮಾಡುವ ಅಣಕು ಚುನಾವಣೆ ನಡೆಸಿ. |
| 3 | | ಗ್ಲೋಬ್ & ನಕಾಶೆಗಳು | **1.ನಕಾಶೆ ರಚಿಸಿ:** ನಿಮ್ಮ ಊರಿನ ಸುತ್ತಮುತ್ತಲಿನ ಭೌಗೋಳಿಕ ಲಕ್ಷಣಗಳನ್ನು ಹೊಂದಿರುವ ಭೂ ನಕಾಶೆ ರಚಿಸಿ.<br>**2.ಸ್ಥಳಗಳನ್ನು ಗುರುತಿಸಿ:**ವಿಶ್ವದ ಭೂ ನಕಾಶೆಯ ರಚಿಸಿ ಪ್ರಮುಖ ಖಂಡಗಳನ್ನುಗುರುತಿಸಿ.<br><br>**ರಂಗೋಲಿ ಚಿತ್ರ ತಯಾರಿಸಿ:**ವಿಶ್ವದ ಆಳ | - ಮೈದಾನದಲ್ಲಿರುವ ವಿದ್ಯುತ್ ಕಂಬಗಳ ಸಾಲನ್ನು ಎತ್ತರ ಪ್ರದೇಶದಿಂದ ವೀಕ್ಷಿಸುವುದು ವೀಕ್ಷಿಸಿದಾಗ ಮಧ್ಯದ ಕಂಬ ಎತ್ತರವಾಗಿರುವುದನ್ನು ಕಂಡುಕೊಳ್ಳುವುದು.<br>(ಸಾಂದರ್ಭಿಕ ಅವಲೋಕನ ಗುರುಚೇತನ ವೃತ್ತಿಪರ ಅಭಿವೃದ್ಧಿ ಸಾಹಿತ್ಯವನ್ನು ಓದಿರಿ.)<br>**( ಅಂದಾಜು ಅವಧಿಗಳು -3)**<br>1.ಮಕ್ಕಳಿಗೆ ತಮ್ಮ ಸುತ್ತಮುತ್ತ ಪರಿಸರದ ಭೌಗೋಳಿಕ ಲಕ್ಷಣಗಳ ಬಗ್ಗೆ ಪರಿಚಯ ಮಾಡಿಸಿ, ನಕಾಶೆ ರಚನೆ ಮಾಡಲು ಸಹಕರಿಸಿ.2. ಮಾದರಿಯ ವಿಶ್ವದ ಭೂಪಟದ ಸಹಾಯ ಪಡೆದು ಮಕ್ಕಳಿಗೆ ಪರಿಚಯಿಸಿ, |

| | | | | |
|---|---|---|---|---|
| | | | ಸಾಗರದ ಮೈದಾನಗಳನ್ನು ರಂಗೋಲಿಯ ಮೂಲಕ ಚಿತ್ರವನ್ನು ತಯಾರಿಸಿ.<br>**ಮಾಹಿತಿ ಸಂಗ್ರಹಣೆ:**ಶಾಲೆಯ ಗ್ರಂಥಾಲಯದ ಸಹಾಯದೊಂದಿಗೆ ವಿಶ್ವದ ಖಂಡಗಳು,ಖಂಡಗಳು,ಸಾಗರಗಳು,ದೇಶಗಳು ಪರ್ವತಗಳು,ಮೈದಾನಗಳು ಮಾಹಿತಿಯನ್ನು ಸಂಗ್ರಹಿಸಿ.<br>**5.ರಸಪ್ರಶ್ನೆ ಕಾರ್ಯಕ್ರಮ:**ವಿಶ್ವದ ಭೌಗೋಳಿಕ ಲಕ್ಷಣಗಳ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸಿ.<br>**6.ಆಲ್ಬಂ ರಚನೆ:**ವಿವಿಧ ಭೂ ನಕಾಶೆಗಳ ಆಲ್ಬಂ ರಚಿಸಿ.<br>**7.ವಿಡಿಯೋ ಪ್ರದರ್ಶನ:**ಅನಿಮಲ್ ಪ್ಲಾನೆಟ್ಜಿಯೋಗ್ರಾಫಿಕಲ್ ಚಾನೆಲ್ ನಲ್ಲಿ ಬರುವ ಭೌಗೋಳಿಕ ವಿಡಿಯೋಗಳನ್ನು ವೀಕ್ಷಿಸಿ.<br>**8.ಪಟ್ಟಿ ಮಾಡಿಸಂಬಂಧಿಕರಿಸಿ:**<br>ಸ್ಥಳೀಯವಾಗಿರು ನದಿ, ಪರ್ವತ, ಗಿರಿಧಾಮ, | ಮಕ್ಕಳಿಂದ ನಕಾಶೆ ರಚನೆ ಮಾಡಲು ಪ್ರೇರೇಪಿಸಿ.<br> 2.ಈ ಕೆಳಗಿನ ರಂಗೋಲಿ ಮಾದರಿಯಂತೆ ಸಾಗರದ ಮೈದಾನಗಳನ್ನು ರಂಗೋಲಿಯಲ್ಲಿ ಬಣ್ಣ ತುಂಬಿಸಲು ಪ್ರೋತ್ಸಾಹಿಸಿ.<br>3.ಶಾಲೆಯ ಗ್ರಂಥಾಲಯ ಮತ್ತು ಭೂಪಟಗಳ ಬಳಕೆ ಮಾಡಲು ಮಕ್ಕಳಿಗೆ ಮಾರ್ಗದರ್ಶಿಸಿ. ಪ್ರಶ್ನೋತ್ತರಗಳನ್ನುರಚಿಸಲು ಸಹಕರಿಸಿರಿ.<br>4. ಹೋಬಳಿ,ತಾಲ್ಲೂಕು,ಜಿಲ್ಲೆ,ರಾಜ್ಯ, ದೇಶ, ವಿದೇಶಗಳ ಮಾದರಿ ನಕಾಶೆಗಳ ರಚಿಸಲು ಅನುಕೂಲಿಸಿ.<br>5.ಅಂತರ್ಜಾಲ,ಯೂಟೂಬ್ ವಿಡಿಯೋ ಗಳನ್ನು ವೀಕ್ಷಿಸಲು ಸಹಕರಿಸಿ.<br>6.ಸ್ಥಳೀಯವಾಗಿರುವ ನದಿ, ಪರ್ವತ, ಮೈದಾನ ಮತ್ತು ಭೌಗೋಳಿಕ ಲಕ್ಷಣಗಳ ಪರಿಚಯ ಮಾಡಿಸಿ, ಸಂಬಂಧಿಕರಿಸಿ ಬರೆಯುಂತೆ ಪ್ರೇರೇಪಿಸಿ. |

| | | | | |
|---|---|---|---|---|
| | | | ಮೈದಾನಗಳನ್ನು ಪಟ್ಟಿ ಮಾಡಿ<br>ಸಂಬಂಧಿಕರಿಸಿ ಬರೆಯಿರಿ. | |
| 4 | | ನಮ್ಮ ಕರ್ನಾಟಕ | ಚಟುವಟಿಕೆ **1.**<br>ಸ್ಥಳೀಯ ಕಲಾವಿದ / ಹಿರಿಯರ ಭೇಟಿ<br>ಅಥವಾ ಶಾಲೆಗೆ ಕರೆ ತರೆಸುವುದು.<br>ಚಟುವಟಿಕೆ 2. ನಾನು ನೀನಾದಾಗ<br>(ಹಬ್ಬವಾದಾಗ)ಚಟುವಟಿಕೆ<br>ಚಟುವಟಿಕೆ 3.ದೂರ ದೂರದ ಊರುಗಳಿಗೆ<br>ಪ್ರಯಾಣ ಮಾಡಿ ಬರುವ ವಾಹನ<br>ಚಾಲಕರ ಸಂದರ್ಶನ.<br>(ಲಾರಿ ಚಾಲಕ)<br>ಚಟುವಟಿಕೆ 4.ಜಾತ್ರೆ/ ಸರ್ಕಸ್ ಗಳ ಬಗ್ಗೆ<br>ಪಟ್ಟಿ ಮಾಡುವುದು.<br>ಚಟುವಟಿಕೆ 5.ಅಜ್ಜ/ಅಜ್ಜಿಯರನ್ನು<br>ಶಾಲೆಗೆ ಕರೆದು ಅವರೊಂದಿಗೆ ತಮ್ಮ<br>ಸಂಸ್ಕೃತಿ,ಹಬ್ಬ,ಜಾತ್ರೆ,ಆಹಾರಗಳ<br>ವಿಶೇಷತೆಯ ಬಗ್ಗೆ ಸಂವಾದ ನಡೆಸುವುದು.<br>ಚಟುವಟಿಕೆ :6. ವಿದ್ಯಾರ್ಥಿಗಳು ತಾವು<br>ನೋಡಿದ ಸಂತೆ/ಮಾರುಕಟ್ಟೆಯ<br>ಅನುಭವಗಳನ್ನು ಹಂಚಿಕೊಳ್ಳುವುದು. | **1**ನೇ ದಿನ (**60**ನಿಮಿಷ)<br>ಚಟುವಟಿಕೆ : **1.** ಶಿಕ್ಷಕರು ಸ್ಥಳೀಯ ಕಲಾವಿದರನ್ನು ಭೇಟಿ ಮಾಡಿಸಿ/<br>ಶಾಲೆಗೆ ಕರೆಸಿ ವಿದ್ಯಾರ್ಥಿಗಳಿಗೆ ನಮ್ಮನಾಡಿನ ಸಂಸ್ಕೃತಿ<br>ವೀರಗಾಸೆ,ಕಂಸಾಳೆ, ಯಕ್ಷಗಾನ, ಕೋಲಾಟ,ಕೊರವಂಜಿ ಮುಂತಾದ<br>ಕಲೆಗಳ ಪರಿಚಯವನ್ನು ಹಾಗೂ ಜಾತ್ರೆ, ಹಬ್ಬಹರಿದಿನಗಳ<br>ಕಲಾವಿದರಿಂದ /ಹಿರಿಯರಿಂದ<br>ತಮ್ಮಅನುಭವಗಳನ್ನುಹಂಚಿಕೊಳ್ಳುವಂತೆ ಮಾಡಿರಿ.<br>**2**ನೇ ದಿನ (**60**ನಿಮಿಷ)<br>ಹಿಂದಿನ ದಿನದ ಚಟುವಟಿಕೆಗಳು ಇಲ್ಲಿ ಮುಂದುವರೆಯುತ್ತವೆ.<br>**3**ನೇ ದಿನ (**60**ನಿಮಿಷ)<br>ಚಟುವಟಿಕೆ : **2.** ಶಾಲೆಯಲ್ಲಿ ಶಿಕ್ಷಕರು- ವಿದ್ಯಾಥಿಗಳು ಸೇರಿ<br>ಕರ್ನಾಟಕದ ನಕ್ಷೆಯನ್ನುರಚಿಸಿ ಬೇರೆಬೇರೆ ಜಿಲ್ಲೆಯ /ಪ್ರದೇಶಗಳ<br>ಉಡುಗೆ-ತೊಡುಗೆಗಳನ್ನು ಧರಿಸಿದ ವಿದ್ಯಾಥಿಗಳು, ತಾವುಗಳು<br>ಪ್ರತಿನಿಧಿಸುವ ಪ್ರದೇಶದ ಜಿಲ್ಲೆ/ ಪ್ರದೇಶದ ನಕ್ಷೆಯಲ್ಲಿ ನಿಂತು ತಮ್ಮ<br>ಉಡುಗೆ ತೊಡುಗೆಯ ಮತ್ತು ತಮ್ಮಲ್ಲಿನ ಆಹಾರ ಪದ್ಧತಿಯ<br>ವಿಶೇಷತೆಯ ಬಗ್ಗೆ ಹೇಳಲಿ..<br>ಉದಾ : ಉತ್ತರ ಕರ್ನಾಟಕದ ಪ್ರತಿನಿಧಿಗಳು “ನಾನು ಉತ್ತರ ಕರ್ನಾಟಕ<br>. ನಮ್ಮ ಪುರುಷರ ವೇಷ ಕಚ್ಚೆಪಂಚೆ ಮತ್ತು ಜುಬ್ಬಾ  ಹಾಗೂ ತಲೆಯ |

| | | | | |
|---|---|---|---|---|
| | | | | ಮೇಲೆ ಟೋಪಿ ಇರುವುದು,  ಹಾಗೂ ನಮ್ಮ ಆಹಾರ ಕಡಕಲು ರೊಟ್ಟಿ,ಬೇಳೆಕಾಳು ಪಲ್ಯ,ತರಹೇವಾರಿ ಚಟ್ನಿಪುಡಿಗಳು ಜೊತೆಗೆ ನೆಂಚಿಕೊಳ್ಳಲು ಈರುಳ್ಳಿ, ಸೌತೆಕಾಯಿ, ಹಸಿಯಾದ ಮೆಂತ್ಯೆಸೊಪ್ಪು.ಹಸಿ ಮೆಣಸಿನಕಾಯಿ ಇರಲೇಬೇಕು”  ಹೀಗೆ ಮಕ್ಕಳು<br><br>ಹೇಳುತ್ತಾರೆ.<br>**4**ನೇ ದಿನ (**60**ನಿಮಿಷ)<br>: ಹಿಂದಿನ ದಿನದ ಚಟುವಟಿಕೆಗಳು ಇಲ್ಲಿ ಮುಂದುವರೆಯುತ್ತವೆ<br><br>ಇದೇ ರೀತಿ ಬೇರೆಬೇರೆ  ಪ್ರದೇಶಗಳ ಆಹಾರ,ಉಡುಗೆ ತೊಡುಗೆಗಳ ಬಗ್ಗೆ ವಿದ್ಯಾರ್ಥಿಗಳು  ಅಭಿನಯಿಸಲಿ. |

| | |
|---|---|
| Filename: | 6 th SS KM |
| Directory: | C:\Users\Admin\Desktop\August AAC\social science\word files |
| Template: | C:\Users\Admin\AppData\Roaming\Microsoft\Templates\Normal.dotm |
| Title: | |
| Subject: | |
| Author: | Admin |
| Keywords: | |
| Comments: | |
| Creation Date: | 7/30/2021 1:00:00 PM |
| Change Number: | 2 |
| Last Saved On: | 7/30/2021 1:00:00 PM |
| Last Saved By: | Admin |
| Total Editing Time: | 0 Minutes |
| Last Printed On: | 7/31/2021 12:28:00 PM |

As of Last Complete Printing

Number of Pages: 6

Number of Words: 866 (approx.)

Number of Characters: 4,938 (approx.)